ಚಿಕ್ಕಬಳ್ಳಾಪುರದಲ್ಲಿ ಸಣ್ಣ ಕೈಗಾರಿಕೆ ಪ್ರಾರಂಭದ ಬಗ್ಗೆ

71 (224) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಇದುವರೆವಿಗೂ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಲು ಎಷ್ಟು ಎಕರೆ ಭೂಮಿಯನ್ನು ಪಡೆಯಲಾಗಿದೆ (ಸರ್ವೆ ನಂಬರುಗಳ ವಿವರವಾರು ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು);

ಇ) ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸುವುದರಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲಾಗುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ ಮತ್ತು ಇತರೆ ಜಾಗೃತಿ ಶಿಬಿರ ಕಾರ್ಯಗಾರವನ್ನು ನಡೆಸಲಾಗಿದೆ. ಕೈಗಾರಿಕಾ ನೀತಿ 2009–14 ಯಡಿ ಬಾಗೇಪಲ್ಲಿಯನ್ನು ಅತ್ಯಂತ ಹಿಂದುಳಿದ ತಾಲ್ಲೂಕು ವಲಯ–1 ರಲ್ಲಿ ಹಾಗೂ ಗುಡಿಬಂಡೆಯನ್ನು ಅತಿ ಹಿಂದುಳಿದ ತಾಲ್ಲೂಕು ವಲಯ–2 ರಲ್ಲಿ ವರ್ಗೀಕರಿಸಲಾಗಿದೆ. ಈ ಪ್ರದೇಶಗಳಲ್ಲಿ ಸ್ಥಾಪಿಸುವ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಶೇಷ ಸವಲತ್ತು ಮತ್ತು ಸೌಕರ್ಯಗಳನ್ನು ಒದಗಿಸಲಾಗಿದೆ. ಶೇ.20 ರಿಂದ 25ರ ಪ್ರಮಾಣದವರೆಗೂ ಬಂಡವಾಳ ಹೂಡಿಕೆ ಸಹಾಯ ಧನಕ್ಕೆ ಅವಕಾಶ ಕಲ್ಪಿಸಿದೆ. ಮುದ್ರಾಂಕ ಶುಲ್ಕ ವಿನಾಯಿತಿ, ನೋಂದಣಿ ಶುಲ್ಕದಲ್ಲಿ ರಿಯಾಯಿತಿ, ಭೂ ಪರಿವರ್ತನೆ ಶುಲ್ಕದಲ್ಲಿ ಶೇ. 100 ರವರೆಗೂ ಮನ್ನಾ ಮತ್ತು ಪ್ರವೇಶ ತೆರಿಗೆ ವಿನಾಯಿತಿ ಸೇರಿದಂತೆ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಲಾಗುತ್ತಿದೆ.

ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿ 2006–07ನೇ ಸಾಲಿನಲ್ಲಿ 192 ಎಕರೆಗಳನ್ನು ಕೈಗಾರಿಕಾ ಪ್ರದೇಶಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ

ಸಂಬಂಧ ಕೆ.ಐ.ಎ.ಡಿ.ಬಿ. ಕಾಯ್ದೆ ಕಲಂ 28(4) ರಡಿ ಅಧಿಸೂಚನೆ ಹೊರಡಿಸಲಾಗಿದೆ.

ಇ) ಈ ಎರಡು ತಾಲ್ಲೂಕುಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳ ಸಾಮರ್ಥ್ಯಕ್ಕನುಗುಣವಾಗಿ ಉದ್ಯೋಗಗಳ ಸೃಜನೆಯಾಗುತ್ತದೆ.

ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಈಗಾಗಲೇ ಬಾಗೇಪಲ್ಲಿ ಕೈಗಾರಿಕಾ ಪ್ರದೇಶದಲ್ಲಿ 17 ಯೋಜನೆಗಳು ಅನುಮೋದನೆ ಗೊಂಡಿದ್ದು, ಸದರಿ ಕೈಗಾರಿಕೆಗಳಲ್ಲಿ ಸುಮಾರು 5221 ಜನರಿಗೆ ಉದ್ಯೋಗಾವಕಾಶಗಳು ದೊರೆಯುವ ಸಂಭವವಿರುತ್ತದೆ.

ಕೊಂಡರೆಡ್ಡಿಪಲ್ಲಿ (ಬಾಗೇಪಲ್ಲಿ ತಾಲ್ಲೂಕು)

ಕ್ರಸಂ.	ಸರ್ವೆ ನಂ.	ವಿಸ್ತೀರ್ಣ ಎ – ಗು
1	33ಪಿ	10–00
2	33/ಪಿ1 33/ಪಿ2	08–18
3	33/ಪಿ (ಹೊಸ ನಂ. 307)	02–18
4	38	00–19
5	39	05–34
6	40/1	01–34
7	40/2	01–25
8	45	08–03
9	46ರ ಪೈಕಿ	06–10
10	46ಪಿ	13–38
11	47	11–38
12	228	04–00
13	269	02–35
14	270ಪಿ	01–25
15	279	01–20

16	283	07–05
17	286	03–00
18	287	03–09
19	288	03–00
20	289/1	00–02
21	289/2	02–00
22	290	01–07
23	297	02–34
24	298	03–00
25	299	04–11
26	300	03–10
	ಒಟ್ಟು	**115–35**

ಬಾಗೇಪಲ್ಲಿ

ಕ್ರ.ಸಂ.	ಸರ್ವೆ ನಂ.	ವಿಸ್ತೀರ್ಣ ಎ – ಗು
1	402/1ಎ1	17–21
2	402/1ಎ2	03–00
3	402/1ಬಿ	03–11
4	402/1ಸಿ	04–00
5	402/1ಡಿ	03–00
6	402/1ಇ1	02–03
7	402/1ಇ2	00–37
8	402/1ಎಫ್	01–11
9	402/ಪಿ5	03–00
10	402/2	03–00
11	403/ಪಿ1 403/ಪಿ2 403/ಪಿ3	12–39

	403/ಪಿ4 403/ಪಿ5 403/ಪಿ6 403/ಪಿ7 403/ಪಿ8	
12	641	03–00
13	642	03–00
14	643ಪಿ	02–26
15	645	02–00
16	647	03–19
17	650/ಪಿ	00–04
18	651	03–06
19	668	03–09
	ಒಟ್ಟು	**76–05**

ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ

72 (225) ಶ್ರೀ ಸಂಪಂಗಿ ಎನ್. : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ಕೋಲಾರ ಜಿಲ್ಲೆಯ ಬಡ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಸರ್ಕಾರದಿಂದ ರೂಪಿಸಿಕೊಂಡಿರುವ ಯೋಜನೆಗಳೇನು, ಅವುಗಳು ಯಾವ ರೀತಿಯಲ್ಲಿ ರೇಷ್ಮೆ ಬೆಳೆಗಾರರಿಗೆ ಪ್ರಯೋಜನವಾಗುವುದು (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು);

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು) :

ಅ) ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ರೈತರು ಸೇರಿದಂತೆ ರಾಜ್ಯದ ಎಲ್ಲಾ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಸರ್ಕಾರವು ಫಲಾನುಭವಿ ಆಧಾರಿತ ಕಾರ್ಯಕ್ರಮಗಳಾದ ರೇಷ್ಮೆ ವರದಾನ ಯೋಜನೆ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ, ಜಿಲ್ಲಾ ವಲಯ